ದಿನಾಂಕ: 02-07-2025 ರಂದು ಬೆಳಗ್ಗೆ 06:30 ರ ಸಮಯದಲ್ಲಿ ಗುಂಡ್ಲುಪೇಟೆ ಬಫರ್‌ಜೋನ್ ವಲಯದ ವಲಯ ಅರಣ್ಯಾಧಿಕಾರಿಗಳಿಗೆ ದೂರವಾಣಿ ಕರೆ ಬಂದು ಗುಂಡ್ಲುಪೇಟೆ ತಾಲ್ಲೂಕು, ಕಸಬಾ ಹೋಬಳಿಗೆ ಸೇರಿದ ಕಂದೇಗಾಲದಿಂದ ಕೋಡಸೋಗೆ ಗ್ರಾಮಕ್ಕೆ ಹೋಗುವ ರಸ್ತೆಯಲ್ಲಿ ಸುಮಾರು 15 ರಿಂದ 20 ಕೋತಿಗಳನ್ನು ಯಾರೋ ಸಾಯಿಸಿದ್ದು, ಈ ದಾರಿಯಲ್ಲಿ ಬಿಸಾಡಿ ಹೋಗಿರುತ್ತಾರೆಂದು ತಿಳಿದುಬಂದ ಮಾಹಿತಿಯನ್ನು ಆಧಾರಿಸಿ ಬಫರ್‌ಜೋನ್ ವಲಯದ ವಲಯ ಅರಣ್ಯಾಧಿಕಾರಿ ಹಾಗೂ ಸಿಬ್ಬಂದಿಗಳು ಕೂಡಲೇ ಕಾರ್ಯಪ್ರವೃತರಾಗಿ ಈ ಮೇಲ್ಕಂಡ ಸ್ಥಳಕ್ಕೆ ಹೋಗಿ ಸ್ಥಳ ಆಜಮಯಿಸಿ ನೋಡಿದ್ದು, ಈ ದಾರಿಯಲ್ಲಿ ಸತ್ತಿರುವ ಕೋತಿಗಳನ್ನು ಬಿಸಾಡಿರುವುದು ಹಾಗೂ ಈ ಸ್ಥಳದಲ್ಲಿಯೇ 01 ಗೋಣಿಚೀಲಗಳು ಬಿದ್ದಿರುವುದು ಕಂಡು ಬಂದಿರುತ್ತದೆ, ಸತ್ತುಬಿದ್ದಿರುವ ಕೋತಿಗಳನ್ನು ಏಣಿಸಿ ನೋಡಲಾಗಿ ಒಟ್ಟು 20 ಕೋತಿಗಳು ಬಿದ್ದಿದ್ದು, ಕುಲಕುಂಶವಾಗಿ ಪರಿಶೀಲಿಸುವಲ್ಲಿ 02 ಕೋತಿಗಳು ಸ್ವಲ್ಪ ಮಟ್ಟಿನ ಉಸಿರಾಟ ಮಾಡುತ್ತಿರುವುದು ಕಂಡು ಬಂದು ಕೂಡಲೇ 02 ಕೋತಿಗಳನ್ನು ಗುಂಡ್ಲುಪೇಟೆ ಪಶುಸಂಗೋಪನ ಇಲಾಖೆಗೆ ಸಾಗಿಸಿದ್ದು, ಅಲ್ಲಿಯ ವೈದ್ಯರಿಂದ 02 ಕೋತಿಗಳಿಗೆ ಚಿಕಿತ್ಸೆ ಕೊಡಿಸಲಾಗುತ್ತಿದೆ, ಈ ವಿಷಯವನ್ನು ಗುಂಡ್ಲುಪೇಟೆ ಉಪ ವಿಭಾಗದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ ಮಾಹಿತಿ ತಿಳಿಸಿದ್ದು, ತದನಂತರ ಮೇಲುಕಾಮನಹಳ್ಳಿ ಶ್ವಾನದಳ ಸಿಬ್ಬಂದಿಗಳನ್ನು ಸ್ಥಳಕ್ಕೆ ಕರೆಸಿಕೊಂಡು ತುರ್ತು ಕಾರ್ಯಚರಣೆ ಕೈಗೊಳ್ಳಲಾಯಿತು, ನಂತರ ಕಂದೇಗಾಲ ಗ್ರಾಮದಿಂದ ಕೋಡಸೋಗೆ ಗ್ರಾಮಕ್ಕೆ ಹೋಗುವ ರಸ್ತೆ ಬದಿಗಳಲ್ಲಿ ಇರುವ ಕೆಲವು ರೈತರ ಜಮೀನುಗಳಲ್ಲಿ ಅಳವಡಿಸಿರುವ ಸಿ.ಸಿ. ಕ್ಯಾಮಾರಗಳಲ್ಲಿ ಪರಿಶೀಲಿಸಲಾಗಿ ಈ ಕೋತಿಗಳನ್ನು ಯಾವ ದಿಕ್ಕಿನಿಂದ ಯಾರು ತಂದಿರುತ್ತಾರೆ ಎಂಬ ಬಗ್ಗೆ ನಿಖರವಾದ ಮಾಹಿತಿಯು ದೊರೆತಿರುವುದಿಲ್ಲ, ಮುಖ್ಯವಾಗಿ ಸ್ಥಳಕ್ಕೆ ಮಾನ್ಯ ಅರಣ್ಯ ಸಂರಕ್ಷಣಾಧಿಕಾರಿಗಳು ಹಾಗೂ ನಿರ್ದೇಶಕರು, ಬಂಡೀಪುರ ವಿಭಾಗ, ಗುಂಡ್ಲುಪೇಟೆ ಉಪ ವಿಭಾಗದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು, ಬಂಡೀಪುರ ಇಲಾಖಾ ಪಶು ವೈದ್ಯಧಿಕಾರಿಗಳು ಸ್ಥಳಕ್ಕೆ ಬಂದು ಪರಿಶೀಲನೆ ನಡೆಸಿ ಈ ಕೃತ್ಯ ಎಸಗಿರುವ ಆಸಾಮಿಗಳು ಯಾರೆಂದು ಪತ್ತೆ ಮಾಡಲು ಹಾಗೂ ಈ ಕೋತಿಗಳ ಸಾವಿಗೆ ಕಾರಣ ತಿಳಿಯುವ ಬಗ್ಗೆ ವೈದ್ಯರಿಂದ ಮರಣೋತ್ತರ ಪರೀಕ್ಷೆ ನಡೆಸಲು ತಿರ್ಮಾನಿಸಿ ವಲಯದ ಕಛೇರಿಯಲ್ಲಿ ವನ್ಯಜೀವಿ ಪ್ರಕರಣವನ್ನು ದಾಖಲು ಮಾಡಲು ಸೂಚಿಸಿರುತ್ತಾರೆ, ನಂತರ ಕೃತ್ಯ ಎಸಗಿರುವ ಆಸಾಮಿಗಳನ್ನು ಪತ್ತೆಹಚ್ಚಲು ಸಿಬ್ಬಂದಿಗಳ ತನಿಖಾ ತಂಡವನ್ನು ರಚನೆ ಮಾಡಿರುತ್ತಾರೆ, ಈ ಸಂಬಂಧ ವಲಯದ ಕಛೇರಿಯಲ್ಲಿ ವನ್ಯಜೀವಿ ಪ್ರಕರಣ ಸಂಖ್ಯೆ: 04/2025-26 ದಿನಾಂಕ: 02-07-2025 ಅನ್ನು ದಾಖಲು ಮಾಡಲಾಗಿದೆ.